ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 138-142
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮಾತು ಮಾಣಿಕ್ಯವೆಂದ ಸರ್ವಜ್ಞ

**ಡಾ. ರೇಣುಕಪ್ರಸಾದ್ ಬಿ. ಆರ್**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು

***Abstract:***
*ಈ ಸಂಶೋಧನಾ ಲೇಖನವು ಸರ್ವಜ್ಞನ ತ್ರಿಪದಿಗಳಲ್ಲಿ ವ್ಯಕ್ತವಾಗಿರುವ 'ಮಾತು ಮಾಣಿಕ್ಯ' ಎಂಬ ಪರಿಕಲ್ಪನೆಯನ್ನು ವಿಶ್ಲೇಷಿಸುತ್ತದೆ. ಸರ್ವಜ್ಞನು ಮಾತಿನ ಮಹತ್ವ, ಅದರ ಮೌಲ್ಯ ಹಾಗೂ ವ್ಯಕ್ತಿಯ ಸಾಮಾಜಿಕ ಬದುಕಿನ ಮೇಲೆ ಬೀರುವ ಪರಿಣಾಮವನ್ನು ತನ್ನ ಸರಳ ಮತ್ತು ಅರ್ಥಗರ್ಭಿತ ತ್ರಿಪದಿಗಳ ಮೂಲಕ ಪ್ರತಿಪಾದಿಸಿದ್ದಾನೆ. ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮಾತಿನ ಸಂಯಮ, ಸತ್ಯ, ಸೌಜನ್ಯ ಮತ್ತು ವಿವೇಕಗಳ ಪಾತ್ರವನ್ನು ಸರ್ವಜ್ಞನು ಒತ್ತಿಹೇಳಿದ್ದಾನೆ. ಕಟುವಾದ ಮಾತು ಸಂಬಂಧಗಳನ್ನು ಹಾಳುಮಾಡಬಲ್ಲದು; ಸಾರ್ಥಕವಾದ ಮಾತು ಸಮಾಜದಲ್ಲಿ ಸ್ನೇಹ, ವಿಶ್ವಾಸ ಮತ್ತು ಸೌಹಾರ್ದವನ್ನು ಬೆಳೆಸಬಲ್ಲದು ಎಂಬ ಸಂದೇಶವನ್ನು ಅವರ ತ್ರಿಪದಿಗಳು ಸಾರುತ್ತವೆ. ಸಮಕಾಲೀನ ಸಮಾಜದಲ್ಲಿಯೂ ಸರ್ವಜ್ಞನ ಮಾತಿನ ಕುರಿತಾದ ವಿಚಾರಗಳು ನೈತಿಕ ಹಾಗೂ ಸಾಮಾಜಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಪ್ರಸ್ತುತವಾಗಿವೆ. ಆದ್ದರಿಂದ, ಸರ್ವಜ್ಞನ 'ಮಾತು ಮಾಣಿಕ್ಯ' ಪರಿಕಲ್ಪನೆಯು ಮಾನವೀಯ ಬದುಕಿಗೆ ಅಗತ್ಯವಾದ ಭಾಷಾ ಸಂಸ್ಕಾರ ಮತ್ತು ಜೀವನ ಮೌಲ್ಯಗಳನ್ನು ಪರಿಚಯಿಸುವ ಮಹತ್ವದ ಚಿಂತನೆಯಾಗಿದೆ.*

***Keywords:*** *ಸರ್ವಜ್ಞ, ತ್ರಿಪದಿ, ಮಾತಿನ ಮಹತ್ವ, ನೈತಿಕ ಮೌಲ್ಯಗಳು, ಸಾಮಾಜಿಕ ಬದುಕು*

## ಪೀಠಿಕೆ

ಕನ್ನಡ ಭಾಷೆ ಮತ್ತು ಸಾಹಿತ್ಯ ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿದೆ. ಕನ್ನಡ ಸಾಹಿತ್ಯದ ಆರಂಭದಲ್ಲಿ ಜೈನ ಕವಿಗಳೇ ಹೆಚ್ಚಾಗಿ ಕೃತಿಗಳನ್ನು ರಚಿಸಿದ್ದಾರೆ. ಅವರುಗಳು ಸಂಸ್ಕೃತ ಮತ್ತು ಪ್ರಾಕೃತಗಳನ್ನು ಬಲ್ಲ ಪಂಡಿತರಾಗಿದ್ದರು. ರಾಜಾಶ್ರಯದಲ್ಲಿ ರಚನೆಯಾದ ಆಗಿನ ಸಾಹಿತ್ಯ ರಾಜನ ಮೆಚ್ಚುಗೆಗಾಗಿ, ರಾಜನ ಆಸ್ಥಾನದಲ್ಲಿದ್ದ ವಿದ್ವಾಂಸರ ಮೆಚ್ಚುಗೆಗಾಗಿ ಬರೆದ ಪಾಂಡಿತ್ಯದಿಂದ ಕೂಡಿದ ಸಾಹಿತ್ಯವಾಗಿತ್ತು. ಭಾಷೆಯಲ್ಲಿ ಸಂಸ್ಕೃತ ಹೆಚ್ಚಾಗಿ, ವಿಷಯದಲ್ಲಿ ಧಾರ್ಮಿಕತೆ ಹೆಚ್ಚಾಗಿ ಕೂಡಿದ ಕಠಿಣ ಶೈಲಿಯ ಪದ್ಯಗಳು, ದೊಡ್ಡ ದೊಡ್ಡ ಸಂಸ್ಕೃತ ವೃತ್ತಗಳಿಂದ ಕೂಡಿದ ಕಾವ್ಯಗಳು ಅಂದು ರಚನೆಯಾದವು.

ಆನಂತರದಲ್ಲಿ ಬಂದ 12ನೇ ಶತಮಾನದ ವಚನಕಾರರು ಸರಳವಾದ ಮಾತುಗಳಲ್ಲಿ ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ಸಾಹಿತ್ಯವನ್ನು ರಚಿಸಿದರು. ನೂರಾರು ಜನರಿಂದ ರಚಿಸಲ್ಪಟ್ಟ ವಚನಗಳು ಸಾವಿರಾರು ಜನರ ಉಪಯೋಗಕ್ಕೆ ಕಾರಣವಾದವು. ಜನಸಾಮಾನ್ಯರಿಂದಲೇ ರಚಿಸಲ್ಪಟ್ಟ ವಚನ ಸಾಹಿತ್ಯ ಜನಸಾಮಾನ್ಯರಲ್ಲಿ ನಮ್ಮದೆಂಬ ಭಾವನೆಗೆ ಕಾರಣವಾಯಿತು. ಆ ವಚನಗಳು ಮನಸ್ಸಿಗೆ ಮುಟ್ಟಿ

***Please cite this article as:*** ರೇಣುಕಪ್ರಸಾದ್, ಬಿ.ಆರ್. (2026). ಮಾತು ಮಾಣಿಕ್ಯವೆಂದ ಸರ್ವಜ್ಞ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(3), 138–142

ಹೃದಯಕ್ಕೆ ಹೊಕ್ಕು ಜನರ ಜೀವನವನ್ನು ಹಸನು ಮಾಡುವುದು ಸಾಧ್ಯವಾಯಿತು. ಈ ಸಾಲಿನಲ್ಲಿ ನಿಲ್ಲುವ 17ನೇ ಶತಮಾನದ ಅಗ್ರಮಾನ್ಯ ಕವಿ ಸರ್ವಜ್ಞ.

ಸರ್ವಜ್ಞನ ಕಾಲ, ದೇಶ, ತಾಯಿ–ತಂದೆ, ಗುರು ಮುಂತಾದ ವಿಚಾರವಾಗಿ ಇದಮಿತ್ಥಂ ಎಂಬುದಾಗಿ ಹೆಚ್ಚೇನೂ ತಿಳಿದುಬಂದಿಲ್ಲ. ಆತನ ವಚನಗಳ ಭಾಷೆ, ವಿಷಯ ಇವುಗಳ ಸ್ವರೂಪದ ಆಧಾರದ ಮೇಲೆ ಆತನ ಕಾಲವನ್ನು 17ನೇ ಶತಮಾನ ಎಂದು ಊಹಿಸಬಹುದಾಗಿದೆ. ಆತನ ವಚನಗಳಲ್ಲಿ ಆತನ ಊರು, ತಾಯಿ–ತಂದೆ ಇವರ ಹೆಸರನ್ನು ಹೇಳಿದಂತಿದೆ. ಆದರೆ ಆ ವಚನಗಳನ್ನು ಆತನೇ ಬರೆದನೇ ಅಥವಾ ಪ್ರಕ್ಷಿಪ್ತವೇ ಎಂದು ಹೇಳಲಾಗದು. ಆತನ ಕಾಲಾನಂತರದಲ್ಲಿ ಅವನ ಹೆಸರಿನಲ್ಲಿ ನೂರಾರು ವಚನಗಳು ಬೇರೆಯವರು ಬರೆದು ಸೇರಿಸಿರುವಂತೆ ಕಂಡುಬರುತ್ತದೆ. ಶ್ರೀ ಚನ್ನಪ್ಪ ಉತ್ತಂಗಿ ಅವರು ಸರ್ವಜ್ಞನ ವಚನಗಳನ್ನು ಶೇಖರಿಸಿ, ಶೋಧಿಸಿ, ಸಂಪಾದಿಸಿ ಕೊಟ್ಟಿದ್ದಾರೆ. ಅದರಲ್ಲಿ ಪ್ರಕ್ಷಿಪ್ತವೆಂಬ ವಚನಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಆದರೂ ಇದೇ ಅಂತಿಮ ಎಂಬುವಂತಿಲ್ಲ. ಸರ್ವಜ್ಞನ ವಚನಗಳ ಆಧಾರದಲ್ಲಿ ಆತನು ಹುಟ್ಟಿದ್ದು ದಾರವಾಡ ಜಿಲ್ಲೆಯ ಅಂಬಲೂರು ಎಂಬ ಗ್ರಾಮದಲ್ಲಿ. ಆತನ ತಾಯಿ ಮಾಳಿ ತಂದೆ ಮಾಸೂರಿನ ಬಸವರಸ ಅಥವಾ ಮಲ್ಲರಸ ಎಂಬುದಾಗಿ ತಿಳಿದುಬರುತ್ತದೆ. ಆತನ ಬಾಲ್ಯದ ವಿಚಾರವಾಗಿ ಖಚಿತವಾದುದು ಏನೂ ತಿಳಿದುಬರುವುದಿಲ್ಲ. ಸರ್ವಜ್ಞನ ಬಗ್ಗೆ ದಂತಕಥೆಗಳೇ ಹೆಚ್ಚಾಗಿ ಕೇಳಿಬರುತ್ತವೆ.

ಸರ್ವಜ್ಞನ ಹೆಸರು ಆತನ ವಚನಗಳ ಅಂಕಿತ ಇತ್ಯಾದಿಗಳನ್ನು ಕುರಿತಂತೆ ಎ.ಆರ್. ಕೃಷ್ಣಶಾಸ್ತ್ರಿಗಳು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ 1969ರಲ್ಲಿ ಪ್ರಕಟಿಸಿರುವ 'ಸರ್ವಜ್ಞ ಕವಿ' ಎಂಬ ಕೃತಿಯ 7ನೇ ಪುಟದಲ್ಲಿ ಹೀಗೆ ಹೇಳುತ್ತಾರೆ. "ಹಿಂದಿನ ವೀರಶೈವ ವಚನಗಳನ್ನು ದಾಸರ ಕೀರ್ತನೆಗಳನ್ನು ನೋಡಿದರೆ ಅವರು ತಮ್ಮ ಹಾಡಿನ ಕೊನೆಗೆ ಅಂಕಿತ ಹಾಕುವುದು ಕಂಡುಬರುತ್ತದೆ. ಈ ಅಂಕಿತವು ಆಯಾ ವಚನಕಾರರ ಅಥವಾ ಕೀರ್ತನಕಾರರ ಇಷ್ಟದೇವತೆಯಾಗಿರುತ್ತದೆ. ಕೂಡಲಸಂಗಮ, ಚನ್ನಮಲ್ಲಿಕಾರ್ಜುನ, ಗುಹೇಶ್ವರ, ಪುರಂದರವಿಠಲ ಇತ್ಯಾದಿ. ಅದರಂತೆ "ಸರ್ವಜ್ಞ" ಎಂಬುದು ಎಲ್ಲವನ್ನು ತಿಳಿದ ಜ್ಞಾನ ಸ್ವರೂಪನಾದ ಭಗವಂತನನ್ನು ಮನಸ್ಸಿನಲ್ಲಿಟ್ಟುಕೊಂಡು ಉಪಯೋಗಿಸಿರುವ ಅಂಕಿತವಾಗಿ ಕಾಣುತ್ತದೆ. ಆದರೆ ಸರ್ವಜ್ಞ ಎಂಬ ಹೆಸರುಳ್ಳ ಯಾವ ದೇವತೆಯೂ, ಯಾವ ಕ್ಷೇತ್ರದಲ್ಲಿಯೂ ಇಲ್ಲ. ಆದ್ದರಿಂದ ಸರ್ವಜ್ಞನು ಇಂಥ ಊರಿನವನು, ಇಂಥ ದೇವರ ಭಕ್ತ ಎಂದು ಹೇಳುವಹಾಗಿಲ್ಲ. ಅವನ ಇಷ್ಟದೇವತೆ "ಒಬ್ಬ ಸರ್ವಜ್ಞ ಕರ್ತನು. ಜಗಕೆಲ್ಲ ಒಬ್ಬನೇ ದೈವ!"

***ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ***
***ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂದ ನೋಡುತಂ***
***ಕೆಲವಂ ಸಜ್ಜನಸಂಗದಿಂದಲರಿಯಲ್ ಸರ್ವಜ್ಞನಪ್ಪಂ ನರಂ***
***ಪಲವುಂ ಪಳ್ಳ ಸಮುದ್ರ ವೈ ಹರಹರಾ ಶ್ರೀಚೆನ್ನಸೋಮೇಶ್ವರಾ॥***

ಎಂಬ ಸೋಮೇಶ್ವರ ಶತಕದ ಒಂದು ಪದ್ಯವನ್ನು ಎಲ್ಲರೂ ಓದಿದ್ದೇವೆ. ಇದಕ್ಕೂ ಈ ಸರ್ವಜ್ಞನಿಗೂ ಏನಾದರೂ ಸಂಬಂಧವಿದೆಯೋ ಏನೋ ತಿಳಿಯದು. ಸರ್ವಜ್ಞನಾಗಬೇಕಾದರೆ ದೇವರೇ ಆಗಬೇಕಾಗಿಲ್ಲ. ಮನುಷ್ಯನು ಸತತವಾಗಿ ಶ್ರದ್ಧೆಯಿಟ್ಟು ಕಲಿಯುತ್ತಾ ಹೋದರೆ ಎಲ್ಲವನ್ನು ತಿಳಿಯಬಹುದು ಎಂಬುದು ಇದರ ಅಭಿಪ್ರಾಯ."

ಸರ್ವಜ್ಞನ ವಚನಗಳು ಸ್ವಯಂಪೂರ್ಣ ಮುಕ್ತಕಗಳ ಹಾಗೆ ಕಂಡು ಬರುತ್ತವೆ. ಈತನ ಹೆಸರಿನಲ್ಲಿ ಸುಮಾರು ಎರಡು ಸಾವಿರಕ್ಕೂ ಹೆಚ್ಚು ಸಂಖ್ಯೆಯ ರಚನೆಗಳಿದ್ದರೂ ಸುಮಾರು ಒಂದು ಸಾವಿರದಷ್ಟು ರಚನೆಗಳು ಈತನವು ಇರಬಹುದು

ಮಿಕ್ಕವು ಪ್ರಕ್ಷೇಪವಿರಬಹುದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಬಸವಣ್ಣ ಮುಂತಾದ ವಚನಕಾರರ ಪ್ರಭಾವದಿಂದಾಗಿ ಈತನ ಒಲವು ವೀರಶೈವದತ್ತ ಹೊರಳಿದಂತೆ ಕಂಡುಬಂದರೂ ಪರಧರ್ಮವನ್ನು ನಿಂದಿಸುವುದು ಎಲ್ಲಿಯೂ ಕಂಡುಬರುವುದಿಲ್ಲ. ನಿರ್ಭೀತನಾಗಿ ಟೀಕೆಮಾಡುವ ಈತ ವಿಶಾಲವಾದ ಮತಾತೀತ ಧೋರಣೆಯನ್ನು ಹೊಂದಿದವನಾಗಿದ್ದಾನೆ. ಯಾರ ಹಂಗಿಗೂ ಒಳಗಾಗದೆ ಸ್ವತಂತ್ರವೇ ಒಳಿತೆಂದು ಸಂಚರಿಸಿದವನು. ಎಲ್ಲಾ ವಸ್ತು ವಿಷಯಗಳನ್ನು ಕುರಿತಂತೆ ಚಿಂತನೆಯನ್ನು ಮಾಡಿರುವ ಸರ್ವಜ್ಞ ತನ್ನ ಆಲೋಚನೆಗಳನ್ನು ಜನಸಾಮಾನ್ಯರಿಗೆ ನಿಲುಕುವ ಉಪಮೆ ರೂಪಕಗಳ ಮೂಲಕ ಅರ್ಥವತ್ತಾಗಿ ಹೇಳುತ್ತಾನೆ. ಆದ್ದರಿಂದಲೇ ಸರ್ವಜನ ಪ್ರಿಯನಾಗುತ್ತಾನೆ.

'ನುಡಿದರೆ ಮುತ್ತಿನ ಹಾರದಂತಿರಬೇಕು' ಎಂಬುದು ಶರಣರ ನುಡಿಯಾದರೆ, 'ಮಾತು ಮಾಣಿಕವು, ಮಾತು ಮುತ್ತು' ಎಂಬುದು ಸರ್ವಜ್ಞನ ನುಡಿ. ಮಾತುಗಳು ದಿವ್ಯಫಲ ಮಾಗಿದಂತೆ ಎಂಬುದು ಈತನ ಸಿದ್ಧಾಂತ. ವಿನಯ, ವಿವೇಕ, ರಸಿಕತೆಗಳಿಂದ ಕೂಡಿದ ಮಾತು ಬದುಕಿನ ಸಾರ್ಥಕತೆಗೆ ಕಾರಣವಾಗುತ್ತದೆ ಎಂಬ ಅರಿವು ಸರ್ವಜ್ಞನದು. ನಡೆ ನುಡಿಗೆ ಅಂತರವಿರಬಾರದು ನುಡಿದಂತೆ ನಡೆದಾಗ ಮಾತ್ರ ಮಾತಿಗೆ ಅರ್ಥ. ಮಾತಿಗೆ ಮಾತು ಬೆಳೆಸುತ್ತಾ ಹೋದರೆ ಜಗಳವಾಗಿ ವೈರತ್ವ ದ್ವೇಷ ಬೆಳೆಯುತ್ತದೆ ಇದು ಬದುಕಿನ ಕೇಡಿಗೆ ಕಾರಣವಾಗುತ್ತದೆ ಎಂಬ ತಿಳುವಳಿಕೆ ಹಾಗೂ ಚಿಂತನೆಗಳೊಂದಿಗೆ ರಚಿತವಾಗಿರುವ ಕೆಲವು ವಚನಗಳು ಹೀಗಿವೆ:

***ಮಾತು ಮಾತಿಗೆ ಆತು ಮಾತು ಕೋಟಿಗಳುಂಟು***
***ಮಾತಾಡಿ ಮನಕೆ ಮುನಿಸಕ್ಕು ಮಾತಿನಲಿ***
***ಸೋತವನೆ ಜಾಣ ಸರ್ವಜ್ಞ***

ಮಾತನಾಡುವುದಕ್ಕೆ ಅರ್ಥವಿರಬೇಕೇ ಹೊರತು ಮಾತಿಗೋಸ್ಕರ ಮಾತನಾಡಬಾರದು. ಸುಮ್ಮಸುಮ್ಮನೆ ಮಾತನಾಡುತ್ತಾ ಹೋದರೆ ಎಷ್ಟು ಬೇಕಾದರೂ ಮಾತನಾಡಬಹುದು. ಆದರೆ ಅದಕ್ಕೆ ಅರ್ಥವೂ, ಮೌಲ್ಯವೂ ಇರುವುದಿಲ್ಲ. ಹೀಗೆ ಮಾತಿಗೋಸ್ಕರ ಮಾತನಾಡಲು ಹೋಗಿ ಮುನಿಸಿಗೆ ಕಾರಣವಾಗುವ ಬದಲು ಮಾತನಾಡದೇ ಇರುವುದು ಲೇಸು. ಮಾತಿನಲ್ಲಿ ಸೋಲುವುದನ್ನು ಅರಿತ ಜಾಣನೇ ನಿಜವಾದ ಜ್ಞಾನಿ ಅನ್ನಬಹುದು. ಮಾತಿನ ಸೋಲೆಂಬುದು ಅರಿಷಡ್ವರ್ಗಗಳಲ್ಲಿ ಒಂದಾದ ಕ್ರೋಧವನ್ನು ಗೆಲ್ಲುವ ಮಾರ್ಗ ಎಂಬ ಅರಿವು ಯಾರಲ್ಲಿ ಇರುತ್ತದೋ ಆತ ಮಾತಿನಲ್ಲಿ ಸೋಲುತ್ತಾನೆ ಆದರೆ ತನ್ನೊಳಗಿನ ಶತ್ರುವಾದ ಕ್ರೋಧವನ್ನು ಗೆದ್ದಿರುತ್ತಾನೆ. ಹೊರಗಿನ(ಮಾತಿನ) ಸೋಲು ಒಳಗಿನ ಗೆಲುವು ಇವುಗಳಲ್ಲಿ ಒಳಗಿನ ಗೆಲುವೇ ನಿಜವಾದ ಗೆಲುವು ಎಂಬುದನ್ನು ಜ್ಞಾನಿಯಾದವನು ಮಾತ್ರ ಅರಿತುಕೊಳ್ಳಬಲ್ಲ. ಮಾತಿನ ಸೋಲನ್ನು ಕುರಿತಂತೆ ಇನ್ನೊಂದು ವಚನದಲ್ಲಿ;

***ಮಾತು ಬಲ್ಲಹ ತಾನು ಸೋತು ಹೊಹುದು ಲೇಸು***
***ಮಾತಿಂಗೆ ಮಾತು ಮಥಿಸಲ್ಕೆ ವಿಧಿ ಬಂದು***
***ಆತು ಕೊಂಡಿಹುದು ಸರ್ವಜ್ಞ***

ಮಾತಿನ ಮರ್ಮ ಹಾಗೂ ಪರಿಣಾಮಗಳನ್ನು ಅರಿತವನು ಮಾತಿನಲ್ಲಿ ಸೋಲುವುದೇ ಗೆಲುವೆಂಬುದನ್ನು ಅರಿತಿರುತ್ತಾನೆ. ಮಾತುಗಳು ಕ್ರೂರ ವಿಧಿಗೆ ಕಾರಣವಾಗುವುದಾದರೆ ಅದನ್ನು ದೂರವಿಡುವ ಜಾಣತನ ನಮ್ಮಲ್ಲಿ ಇರಬೇಕೆಂದರೆ ಮಾತಿನಲ್ಲಿ ಸೋಲುವ ಮೂಲಕ ಆ ಕ್ರೂರವಿಧಿಯನು ಗೆಲ್ಲುವ ಕಾರ್ಯಮಾಡಬೇಕೆಂಬುದು ಸರ್ವಜ್ಞನ ಚಿಂತನೆ. ಇಂತಹ ವಚನಗಳ ಮೂಲಕ ಬದುಕಿನ ಮೂಲ ಮರ್ಮವನ್ನೇ ಕುರಿತಂತೆ ಓದುಗರು ಚಿಂತನೆ ಮಾಡಲು ಕಾರಣವಾಗುತ್ತಾನೆ ಸರ್ವಜ್ಞ. ಸೋಲು ಮತ್ತು ಗೆಲುವು ಬದುಕಿನ ಎರಡು ಮುಖ್ಯ ಸಂಗತಿಗಳು ಎಲ್ಲರೂ ಗೆಲುವಿಗಾಗಿಯೇ ಶ್ರಮಿಸುತ್ತಾರೆ. ಮತ್ತು ಅದನ್ನೇ ಜೀವನದ ಸಾರ್ಥಕತೆ ಎಂದೂ ಭಾವಿಸುತ್ತಾರೆ. ಮೇಲ್ನೋಟಕ್ಕೆ ಅದು

ನಿಜವೂ ಹೌದು. ಆದರೆ ಅಂತಹ ಗೆಲುವೇ ನಮಗರಿವಿಲ್ಲದಂತೆ ನಮ್ಮ ನಾಶಕ್ಕೆ ಕಾರಣವಾಗುವುದಾದರೆ ಅದು ನಿಜವಾದ ಗೆಲುವೇ? ಖಂಡಿತ ಅಲ್ಲ. ಆದ್ದರಿಂದ ತತ್ಕಾಲೀನ ಗೆಲುವುಗಳು ದೀರ್ಘಕಾಲದ ನಾಶಕ್ಕೆ ಕಾರಣವಾಗುವುದಾದರೆ ತತ್ಕಾಲೀನ ಸೋಲುಗಳೇ ಒಳ್ಳೆಯವು ಅಲ್ಲವೇ? ಈ ರೀತಿಯ ವಚನಗಳು ಸೋತುಗೆಲ್ಲುವ ಅರಿವಿನ ಚಿಂತನೆಗಳಾಗಿ ಜೀವಪರ ಆಶಯಗಳನ್ನು ಪ್ರತಿಪಾದಿಸುತ್ತವೆ.

ಮಾತಿನ ಸಾಮರ್ಥ್ಯವನ್ನು ಹಗುರವಾಗಿ ಪರಿಗಣಿಸುವುದು ಸರಿಯಾದ ಚಿಂತನೆಯಲ್ಲ. ಮಾತು ಎಷ್ಟು ಬಲಿಷ್ಟವಾದ ಶಕ್ತಿಯುತವಾದ ಸಂಗತಿ ಎಂಬುದನ್ನು ಮುಂದಿನ ವಚನದಲ್ಲಿ ಗ್ರಹಿಸಬಹುದಾಗಿದೆ;

***ಮೆಲ್ಲನೆಯ ಸುರಿನೀರು ಕಲ್ಲು ಭೇದಿಸಲಕ್ಕು***
***ಸೊಲ್ಲರಿತು ನುಡಿವ ಒಳ್ನುಡಿಯು ಬಲ್ಲಂದ***
***ನಲ್ಲವೆನಿಸುವದು ಸರ್ವಜ್ಞ***

ಕಲ್ಲು ಮತ್ತು ನೀರಿನಲ್ಲಿ ಕಲ್ಲು ಕಠಣವಾದ ವಸ್ತುವೆಂದು ಎಲ್ಲರಿಗೂ ಇರುವ ಸಾಮಾನ್ಯ ಜ್ಞಾನ. ಅದು ಸತ್ಯವೂ ಹೌದು. ಆದರೆ ಅಂತಹ ಕಠಣವಾದ ವಸ್ತುವನ್ನು ಸಹ ಭೇದಿಸುವ ಸಾಮರ್ಥ್ಯ ಸುರಿಯುವ ನೀರಿಗೆ ಇದೆ. ಅಂದರೆ ನಾವು ಯಾವುದನ್ನು ಹಗುರವೆಂದು ಭಾವಿಸುತ್ತೇವೋ ಅದು ಅದರ ನಿಜವಾದ ಸಾಮರ್ಥ್ಯವಾಗಿರಲಾರದು. ದೀರ್ಘಕಾಲದ ನಿರಂತರ ಕ್ರಿಯೆಗಳು ಅದರ ಬಲದಿಂದ ಅಸಾಧ್ಯವಾದುದನ್ನು ಸಾಧ್ಯವಾಗಿಸಬಹುದು. ಹಾಗೆಯೇ ಭೌತಿಕ ಶಕ್ತಿ, ಸಾಮರ್ಥ್ಯಗಳಿಂದಾಗದ ಕೆಲಸಗಳನ್ನು ಅರಿತು ನುಡಿಯುವ ಒಳ್ನುಡಿ(ಚೆನ್ನಾದ ಮಾತು)ಗಳಿಂದ ಸಾಧಿಸಬಹುದು. ಭಯಂಕರ ಯುದ್ಧಗಳನ್ನು ಮಾಡಿಸುವ ಅಥವಾ ನಿಲ್ಲಿಸುವ ಮೂಲ 'ಮಾತೇ' ಆಗಿದೆ. ಹಾಗೆಯೇ ಜೀವಜಗತ್ತಿನ ಸಂಬಂಧಗಳನ್ನು ಬೆಸೆಯುವ ಅಥವಾ ಬೇರ್ಪಡಿಸುವ ಶಕ್ತಿ ಮಾತಿಗೆ ಮಾತ್ರ ಸಾಧ್ಯವಾದುದು. ಇದನ್ನೇ ಅಲ್ಲವೇ ನಾವು ಇತಿಹಾಸದಿಂದ ಕಲಿತಿರುವುದು. ಸರಳವಾದ ಮಾತುಗಳ ಮೂಲಕ ಸೂಚ್ಯವಾಗಿ ಹೇಳುವ ಸರ್ವಜ್ಞನ ಇಂತಹ ಮಾತುಗಳು ಅಧ್ಯಯನ ಯೋಗ್ಯವಾಗಿವೆ.

***ಮಾತಿಂಗೆ ಮಾತುಗಳು ಓತು ಸಾಸಿರವುಂಟು***
***ಮಾತಾಡಿದಂತೆ ನಡೆದಾತ ಜಗವನ್ನು***
***ಕೂತಲ್ಲಿ ಆಳ್ವ ಸರ್ವಜ್ಞ***

ನುಡಿದಂತೆ ನಡೆಯುವ ಮನುಷ್ಯನು ಕೂತಲ್ಲಿಯೇ ಜಗತ್ತನ್ನು ಆಳುವ ಸಾಮರ್ಥ್ಯ ಪಡೆಯಬಹುದೆಂದು ಪ್ರತಿಪಾದಿಸುವ ಈ ವಚನ ಬಸವಣ್ಣನವರ 'ನುಡಿಯೊಳೊಂದಾಗಿ ನಡೆಯದಿದ್ದರೆ ಮೆಚ್ಚ ನಮ್ಮ ಕೂಡಲಸಂಗಮದೇವ' ಎಂಬ ಮಾತನ್ನು ನೆನಪಿಸುತ್ತದೆ. ನಡೆ–ನುಡಿ ಒಂದಾದ ಬದುಕಿನ ಶ್ರೇಷ್ಟತೆಯನ್ನು ಈ ಇಬ್ಬರ ವಚನಗಳಲ್ಲಿಯೂ ಗುರುತಿಸಬಹುದಾಗಿದೆ.

ಇದೇ ರೀತಿಯಾಗಿ ಮಾತಿನ ಮಹತ್ವವನ್ನು ಕುರಿತಂತೆ ಸರ್ವಜ್ಞನ ಇನ್ನೊಂದೆರಡು ವಚನಗಳನ್ನು ಗಮನಿಸಬಹುದು.

***ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ***
***ರಸಿಕನಲ್ಲದವನ ಬರಿಮಾತು ಕಿವಿಗೆ ಕೂ***
***ರ್ದಸಿಯು ಬಡಿದಂತೆ ಸರ್ವಜ್ಞ***

***ಕಾದ ಕಬ್ಬುನವು ತಾ ಹೊಯ್ದೊಡನೆ ಕೂಡುವುದು***
***ಹೋದಲ್ಲಿ ಮಾತ ಮರೆದಿಹರೆ ಕಬ್ಬುನವು***
***ಕಾದಾರಿದಂತೆ ಸರ್ವಜ್ಞ***

ಮಾತುಗಳು ಕೇವಲ ಶಕ್ತಿ, ಸಾಮರ್ಥ್ಯಗಳನ್ನು ಪ್ರದರ್ಶಿಸುವುದಷ್ಟೇ ಆಗಿರದೆ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯೂ ಆಗಿರುತ್ತವೆ. ಸಮಯ ಸಂದರ್ಭವರಿತು ಹಿತವಾಗಿ ಮಿತವಾಗಿ ಮಾತನಾಡುವ ವಿವೇಕಿಗಳ ಮಾತು ಶಶಿಯುದಿಸಿ ಬಂದಂತಾದರೆ ಅವಿವೇಕಿಗಳ ಮಾತು ಕಿವಿಗೆ ಕೂರ್ದಸಿಯ ಬಡಿದಂತೆ ಹಾಗಾಗಿ ರಸಿಕತನವೆಂಬುದು ವ್ಯಕ್ತಿತ್ವಕ್ಕೆ ಸಂಬಂಧಿಸಿದುದಾದರೂ ಅದು ಮಾತಿನ ಮೂಲಕವೇ ಅಭಿವ್ಯಕ್ತವಾಗಿವಂತದ್ದು. ಅರಸಿಕತೆಯೂ ಅಷ್ಟೇ ಅವಿವೇಕಿಗಳ ಮಾತಿನಲ್ಲಿಯೇ ವ್ಯಕ್ತವಾಗುತ್ತದೆ.

ಜಿ.ಎಸ್.ಎಸ್ ಅವರ 'ಪ್ರೀತಿ ಇಲ್ಲದ ಮೇಲೆ' ಎಂಬ ಕವನದಲ್ಲಿ ಬರುವ ಸಾಲುಗಳಲ್ಲಿ ಪ್ರೀತಿಯಿಲ್ಲದ ಮೇಲೆ ಮಾತಿಗೆ ಮಾತು ಕೂಡೀತು ಹೇಗೆ? ಅರ್ಥ ಹುಟ್ಟೀತು ಹೇಗೆ.... ಎಂಬ ಸಾಲಿನಲ್ಲಿನ 'ಪ್ರೀತಿ'ಎಂಬುದು ಮಾತು ಕೂಡಲು ಅರ್ಥ ಹುಟ್ಟಲು ಕಾರಣವಾದರೆ. ಸರ್ವಜ್ಞ ಈ ವಚನದಲ್ಲಿ ಸಮಯವರಿತು ಮಾತನಾಡುವ 'ವಿವೇಕಿ'ಗಳ ಮಾತು ಕಾದ ಕಬ್ಬುನದಂತೆ ಬೇಗನೆ ಕೂಡಿಕೊಳ್ಳುತ್ತದೆ ಎಂದಿದ್ದಾನೆ. ಸಮಯ ಸಂದರ್ಭವರಿಯದೆ ಮಾತನಾಡುವ ಅವಿವೇಕಿಗಳ ಮಾತು ಕಾದಾರಿದ ಕಬ್ಬುನವನ್ನು ಬಡಿದಂತೆ ನಿಷ್ಪ್ರಯೋಜಕವಾದ ಕಾರ್ಯವಾಗುತ್ತದೆ.

***ಮಾತು ಬಲ್ಲಾತಂಗೆ ಮಾತೊಂದು ಮಾಣಿಕವು***
***ಮಾತ ತಾನರಿಯದಧಮಂಗೆ ಮಾಣಿಕವು***
***ತೂತು ಬಿದ್ದಂತೆ ಸರ್ವಜ್ಞ***

***ಹೊತ್ತಿಗೊದಗಿದ ಮಾತು ಸತ್ತವನು ಎದ್ದಂತೆ***
***ಹೊತ್ತಾಗಿ ನುಡಿದ ಮಾತು ಕೈ ಜಾರಿದ***
***ಮುತ್ತಿನಂತಿಹುದು ಸರ್ವಜ್ಞ***

ನಮ್ಮ ಜನಪದರು ಗಾದೆಗಳ ರೂಪದಲ್ಲೂ ಮಾತಿನ ಮೌಲ್ಯವನ್ನು, ಮಹತ್ವವನ್ನು ನಮಗೆ ತಿಳಿಸಿದ್ದಾರೆ. 'ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು', 'ಮಾತು ಮನೆ ಕೆಡಿಸಿತು ತೂತು ಒಲೆ ಕೆಡಿಸಿತು' ಇತ್ಯಾದಿ. ಈ ಬಗೆಯ ಗಾದೆಮಾತುಗಳು ಸರ್ವಜ್ಞನ ವಚನಗಳಲ್ಲಿ ಸಮಯೋಚಿತವಾಗಿ ರಚಿತವಾಗಿವೆ. ಬಸವಣ್ಣನವರ 'ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು' ಎಂಬ ಪುನರುಕ್ತಿಯಂತೆ ಮಾತು ಬಲ್ಲಾತಂಗೆ ಮಾತು ಮಾಣಿಕದಂತೆ ಎಂಬ ಸರ್ವಜ್ಞನ ವಚನದ ಮಾತುಗಳು. ಮಾತಿನ ಮಹತ್ವವರಿತವರಿಗೆ ಮಾತು ಮಾಣಿಕ್ಯದ ದೀಪ್ತಿಯಂತೆ ತಂಪನೆರೆವ, ಬೆಳ್ದಿಂಗಳಂತೆ ಆನಂದವನ್ನು ನೀಡುವ ಸಂಗತಿಯಾದರೆ ಮಾತಿನ ಮಹತ್ವ ತಿಳಿಯದವರಿಗೆ ಮಾತು ತೂತು ಬಿದ್ದ ಮಾಣಿಕ್ಯದಂತೆ ಯಾವ ಕಾಂತಿಯನ್ನು ಹೊಮ್ಮಿಸಲಾಗದ, ಆನಂದವನ್ನು ನೀಡಲಾಗದ ನಿಷ್ಪ್ರಯೋಜಕ ಸಂಗತಿ. ಹಾಗೆಯೇ ಹೊತ್ತಿಗೆ ಅಂದರೆ ಸಮಯಕ್ಕೆ ಸರಿಯಾಗಿ ಒದಗಿ ಬರುವ ಮಾತು ಮುತ್ತಿನಂತೆ ಮೌಲ್ಯಯುತವಾದದ್ದು, ಅಪರೂಪದ್ದೂ, ಅಮೃತತ್ವವನ್ನು ಹೊಂದಿರುವದೂ ಆಗಿರುತ್ತದೆ. ಹಾಗೆ ಸಮಯ ಸಂದರ್ಭವರಿತು ಮಾತನಾಡುವುದು ಜ್ಞಾನಿಗಳು ಮತ್ತು ವಿವೇಕಿಗಳಿಂದ ಮಾತ್ರ ಸಾಧ್ಯ. ಆದ್ದರಿಂದಲೇ ಸಮಯವರಿತು ಮಾತನಾಡುವ ವಿವೇಕವಂತರನ್ನು ರೂಪಿಸುವಲ್ಲಿ ಸರ್ವಜ್ಞನ ವಚನಗಳು ಜನಮಾನಸದ ಗುರುವಾಗಬಲ್ಲವು.

**ಪರಾಮರ್ಶನ ಗ್ರಂಥಗಳು**


- ಕಲಬುರ್ಗಿ, ಎಂ.ಎಂ. (1993). ಬಸವಣ್ಣನವರ ವಚನಗಳು. ಕನ್ನಡ ಪುಸ್ತಕ ಪ್ರಾಧಿಕಾರ
- ಕೃಷ್ಣಶಾಸ್ತ್ರೀ, ಎ.ಆರ್. (1941). *ಸರ್ವಜ್ಞ ಕವಿ.* ಮೈಸೂರು ವಿಶ್ವವಿದ್ಯಾನಿಲಯ, ಪ್ರಚಾರಪುಸ್ತಕ ಮಾಲೆ–29, ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್.
- ರಾಜಪ್ಪ ದಳವಾಯಿ. (2018). ಕನ್ನಡ ಸಾಹಿತ್ಯ ಕೋಶ, ಎಚ್.ಬಿ.ಟಿ. ಪಬ್ಲಿಕೇಷನ್.